ಯಾವಾಗಲೂ ನಗುವುದೇ ಹೀಗೆ ಅನ್ನುವ ಹಾಗೆ ಮಾದಕವಾಗಿ ನಕ್ಕರಂತೆ. ಸೆಕ್ರೆಟರಿಯ ಹೆಂಡತಿ ಬಹಳ ಸಂತೋಷದಿಂದ ಹೊರಡಲು ಒಪ್ಪಿದರಂತೆ. ಆಮೇಲೆ ದಂಪತಿಯನ್ನು ಕರೆದುಕೊಂಡು ತೀರ್ಥಯಾತ್ರೆಗೆ ಕರೆದುಕೊಂಡು ಹೋಗಿಬಂದರಂತೆ. ಅದಾದಮೇಲೆ ಆ ಸೆಕ್ರೆಟರಿಯಿಂದ ಜಲಜಾ ಮೇಡಮ್‌ಗೆ ಏನೂ ತೊಂದರೆ ಆಗಲಿಲ್ಲವಂತೆ. ಅವನು ಜಗಳವಾಡಿದರೆ ನೀವು ತಪ್ಪು ತಿಳಿದುಕೊಂಡಿದ್ದೀರಿ, ನಾನು ದೇವರ ಮೇಲಿನ ಭಕ್ತಿಯಿಂದ, ನಿಮ್ಮ ಮೇಲಿನ ಗೌರವದಿಂದ ತೀರ್ಥಯಾತ್ರೆಗೆ ಹೋಗೋಣ ಅಂತ ಅಂದಿದ್ದೆ ಎಂದು ಹೇಳಲು ಮೇಡಮ್ ರೆಡಿಯಾಗಿದ್ದರಂತೆ.

★★★

"ನೋಡು, ಇದು ಜಲಜಾ ಮೇಡಮ್ ಕತೆ. ಈಗ ನೀನು ಹೇಳು. ಕತೆ ಸರಿಯಿದೆಯೇ?" ಎಂದು ಶರ್ಲಿ ನನ್ನ ಕಣ್ಣಲ್ಲಿ ಕಣ್ಣಿಟ್ಟು ಕೇಳಿದರು.

ನಾನು ಏನು ಹೇಳಲಿ? ನನಗಂತೂ ಈ ಕತೆ ನಿಜವಾಗಿ ನಡೆದಿದ್ದು ಅನ್ನುವ ನಂಬಿಕೆಯೇ ಬರಲಿಲ್ಲ. ಹಾಗೆ ಅಷ್ಟು ಸುಲಭವಾಗಿ ಆ ಸೆಕ್ರೆಟರಿ ಮೋಸ ಹೋಗುವುದು ಸಾಧ್ಯವೇ? ಅದು ನಿಜವಾಗಿದ್ದರೂ ಜಲಜಾ ಮೇಡಮ್ ಗಂಡ ನಡೆದುಕೊಂಡ ರೀತಿ ಯಾವ ರೀತಿಯಲ್ಲೂ ಘನತೆಯದು ಎಂದು ಅನ್ನಿಸಲಿಲ್ಲ. ಇದನ್ನು ಹೇಳಿದರೆ ಶರ್ಲಿ, "ನಿನಗಿಂತಾ ಅವರೇ ಬೆಟರ್" ಅಂದುಬಿಟ್ಟರು. "ಅಷ್ಟು ಸುಲಭವಾಗಿ ಯಾರನ್ನೂ ಜಡ್ಜ್ ಮಾಡಬೇಡ. ಜಲಜಾ ಮೇಡಮ್‌ಗೆ ಕೆಲಸ ಸಿಕ್ಕಿತ್ತಲ್ಲಾ, ಅದಕ್ಕೆ ಖುಷಿಪಡು" ಎಂಬ ಉಪದೇಶವನ್ನೂ ಮಾಡಿದರು. ಕೇಳುವವನಿಗೆ ಏನು ಅನ್ನಿಸಬೇಕು ಎನ್ನುವುದನ್ನೂ ಕತೆ ಹೇಳುವವರೇ ಹೇಳಿದರೆ, ಕೇಳಿ ಹೀಗೇ ಪ್ರತಿಕ್ರಿಯಿಸಬೇಕು ಎಂದು ಬಲವಂತ ಮಾಡಿದರೆ ಕತೆ ಕೇಳಿಸಿಕೊಂಡ ಖುಷಿ ಕಡಿಮೆಯಾಗಿಬಿಡುತ್ತದೆಯಲ್ಲವೇ? ಹಾಗಾಗಿ ನಾನು ಈ ಕತೆಯ ಬಗ್ಗೆ ಯಾವ ಅಭಿಪ್ರಾಯವನ್ನೂ ನಿಮಗೆ ನೀಡುವುದಿಲ್ಲ. ಈಗಿನ ಓದುಗರು ಸ್ತ್ರೀವಾದ ಇತ್ಯಾದಿ ಓದಿಕೊಂಡಿರುತ್ತಾರೆ. ಅವರಿಗೆ ಈ ಕತೆ ಬೇರೆ ರೀತಿ ಅನ್ನಿಸಬಹುದು. ನಾನು ಶರ್ಲಿಯವರ ಹತ್ತಿರ ವಾದ ಮಾಡಲು ಹೋಗಲಿಲ್ಲ. ಆದರೆ, ಒಂದು ಅನುಮಾನ ಹಾಗೇ ಉಳಿಯಿತು. ಅವರು ಈ ಕತೆ ನನಗೆ ಸಂಬಂಧಿಸಿದವರದು ಅಂದರೋ, ಅಥವಾ ತನ್ನ ಸಂಬಂಧಿಗಳದ್ದು ಅಂದರೋ? ಶಾಸ್ತ್ರಿ ದಂಪತಿಗೂ ಶರ್ಲಿಗೂ ಹೇಗೆ ಸಂಬಂಧ? ಶರ್ಲಿಯವರ ಅಮ್ಮ ಇದನ್ನು ಶರ್ಲಿ ಕೆಲಸಕ್ಕೆ ಸೇರಿದಾಗ ಯಾಕೆ ಹೇಳಿದರು? ಇದನ್ನೆಲ್ಲಾ ಕೇಳುವ ಬದಲು ನಾನು, "ಈಗ ಜಲಜಾ ಮೇಡಮ್, ಶಾಸ್ತ್ರಿಗಳು ಎಲ್ಲಿದ್ದಾರೆ? ಸುಖವಾಗಿದ್ದಾರೆಯೇ?" ಎಂದು ಕೇಳಿದೆ.

"ಅದು ಇನ್ನೊಂದು ಕತೆ ಬಿಡು. ನಮ್ಮ ಪಾಪದ ಬಾಸ್ ಇಲ್ಲದೇ ಇರುವ ಇನ್ನೊಂದು ದಿನ ಅದನ್ನು ಹೇಳುತ್ತೇನೆ" ಅಂದರು ಶರ್ಲಿ.

**ಬಿ.ವಿ. ರಾಮಪ್ರಸಾದ್**

ಲೇಖಕರು ಶಿವಮೊಗ್ಗದವರು. ಕುವೆಂಪು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಪ್ರಾಧ್ಯಾಪಕರು. ಕುವೆಂಪು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ, ಹೈದರಾಬಾದ್‌ನ ಇ.ಎಫ್.ಎಲ್.ಯು.ದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಭಾಷಾಶಾಸ್ತ್ರ ಅವರ ಆಸಕ್ತಿಯ ಕ್ಷೇತ್ರ.